ತುಂಗಭದ್ರಾ ಜಲಾಶಯದ ನೀರಿನ ಸಂಗ್ರಹಣೆ

714(836) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಭದ್ರಾ ಜಲಾಶಯದ ನೀರಿನ ಸಂಗ್ರಹಣಾ ಪ್ರಮಾಣ ಎಷ್ಟು : ಪ್ರಸ್ತುತ ಎಷ್ಟು ಟಿ.ಎಂ.ಸಿ. ನೀರು ಸಂಗ್ರಹಣೆಯಾಗುತ್ತಿದೆ ಹಾಗೂ ಎಷ್ಟು ಎಕರೆ ಭೂಮಿಗೆ ಜಲಾಶಯದಿಂದ ನೀರು ಒದಗಿಸಲಾಗುತ್ತಿದೆ.

ಆ) ಜಲಾಶಯದಿಂದ ಅಗತ್ಯ ಸಂದರ್ಭದಲ್ಲಿ ಸಮರ್ಪಕ ನೀರು ದೊರೆಯದೆ ರೈತರ ಬೆಳೆ ನಷ್ಟವಾದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ತುಂಗಭದ್ರಾ ಜಲಾಶಯದ ನೀರಿನ ಮೂಲ ಸಂಗ್ರಹಣಾ ಸಾಮರ್ಥ್ಯವು 133.00 ಟಿ.ಎಂ.ಸಿ. 1993ನೇ ಸರ್ವೆ ಪ್ರಕಾರ ಹೂಳಿನಿಂದ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯವು 111.507 ಟಿ.ಎಂ.ಸಿ. ಯಾಗಿದೆ. ಈ ಯೋಜನೆಯಿಂದ ಕರ್ನಾಟಕದ 3,62,795 ಹೆಕ್ಟೇರ್ ಪ್ರದೇಶಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ.

ಆ) ಇಲ್ಲ.

ಇಲ್ಲಿಯವರೆಗೆ ಇಲಾಖೆಯು ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನಿಸಿದ ದಿನಾಂಕದವರೆಗೆ ಕಾಲುವೆಯಲ್ಲಿ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಲಾಗಿರುತ್ತದೆ. ಆದ್ದರಿಂದ ನೀರು ಪೂರೈಸಿಲ್ಲವೆಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ತುಂಗಾ ಮೇಲ್ದಂಡೆ ಯೋಜನೆ

715(837) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಾ ಮೇಲ್ದಂಡೆ ಯೋಜನೆ ಮತ್ತು ತುಂಗಾ ಡೈವರ್‌ಷನ್ ಏತ ನೀರಾವರಿ ಯೋಜನೆ ಹಾಗೂ ಸಿಂಗಟಾಲೂರು ಯೋಜನೆಗಳಿಂದ ತುಂಗಾ ಭದ್ರ ಜಲಾಶಯಕ್ಕೆ ನೀರಿನ ಸಂಗ್ರಹಣಾ ಪ್ರಮಾಣ ಕಡಿಮೆಯಾಗುವುದಿಲ್ಲವೇ?

ಆ) ನೀರಿನ ಕೊರತೆ ನೀಗಿಸಲು ಸದರಿ ಜಲಾಶಯ ವ್ಯಾಪ್ತಿಯಲ್ಲಿ ಪರ್ಯಾಯ ಯೋಜನೆಗಳನ್ನು ಕೈಗೊಳ್ಳುವ ಬಗ್ಗೆ ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಇಲ್ಲಾ

ಆ) ಸದರಿ ಜಲಾಶಯವು ಹೂಳಿನಿಂದ ಸಂಗ್ರಹಣಾ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿರುವುದರಿಂದ ಇದನ್ನು ಸರಿದೂಗಿಸಲು ಅಚ್ಚುಕಟ್ಟು ಪ್ರದೇಶದಲ್ಲಿ ಸಮತೋಲನ ಜಲಾಶಯಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ನಿರ್ಮಿಸಲು ಉದ್ದೇಶಿಸಿದೆ.

1. ಬೆನ್ನೂರು 2. ಹಡಗಿನಾಳ್ 3. ಚೀಕಲಪರ್ವಿ 4. ಮೆಟ್ರಿ 5. ದೇವಲಾಪುರ 6. ಜಾಲಿಬೆಂಚಿ 7. ಮದಿರೆ 8. ದರೋಜಿ.